<u>ಪ್ರಥಮ ದರ್ಜೆಯ ನ್ಯಾಯಿಕ ದಂಡಾಧಿಕಾರಿಗಳವರ ನ್ಯಾಯಾಲಯ ಅಫಜಲಪೂರ</u>

C.C No. 7/2015

CW-1/PW-7

ಹೆಸರು ಃ ಮಂಜುನಾಥ ಕುಸಗಲ

ತಂ/ಗಂ ಹೆಸರು ಃ ಸಿದ್ದಪ್ಪ

ವಯಸ್ಸು ಃ 48 ವರ್ಷ

ಉದ್ಯೋಗ ಃ P.I.

ವಾಸ ಸ್ಥಳ ಃ ಹುಬ್ಬಳಿ

---

<u>ದಿಃ **25-02-2026** ರಂದು ಸಾಕ್ಷಿಗೆ ಪ್ರಮಾಣವಚನ ಭೋಧಿಲಾಯಿತು.</u>

<u>ಮುಖ್ಯ ವಿಚಾರಣೆಃ ಮಾನ್ಯ ಸರ್ಕಾರಿ ಸಹಾಯಕ ಅಭಿಯೋಜಕರಿಂದ</u>

ನಾನು ದಿನಾಂಕಃ 21-09-2009 ರಿಂದ 06-09-2012 ರವರೆಗೆ ದೇವಲಗಾಣಗಾಪುರ ಠಾಣೆಯಲ್ಲಿ PSI ಎಂದು ಕರ್ತವ್ಯ ನಿರ್ವಹಿಸಿದ್ದೇನೆ.

ದಿಃ 08-05-2010 ರಂದು ನಡೆದ ಗ್ರಾ.ಪಂ. ಚುನಾವಣಾ ಮತದಾನ ನಡೆದು ದಿಃ 17-05-2010 ರಂದು ಅಫಜಲಪುರ ತಾಲೂಕಿನ ಗ್ರಾ.ಪಂ. ಗಳ ಮತ ಎಣಿಕೆ ಬಂದೋಬಸ್ತ ಕರ್ತವ್ಯಕ್ಕೆ ಅಫಜಲಪೂರ CPI ರವರು ನೇಮಿಸಿದ ಮೇರೆಗೆ ಅಫಜಲಪುರ ಪಟ್ಟಣದಲ್ಲಿರುವ ಮಹಾಂತೇಶ್ವರ ವಿದ್ಯಾವರ್ಧಕ ಕಾಲೇಜಿನಲ್ಲಿ ಮತಎಣಿಕೆ ಬಂದೋಬಸ್ತ ಕರ್ತವ್ಯಕ್ಕೆ ಸದರಿ ಕಾಲೇಜಿನ ಮುಖ್ಯದ್ವಾರದ ಗೇಟಿನ ಹತ್ತಿರ ನನಗೆ ಮತ್ತು ರೇವೂರು ಠಾಣೆಯ HC-222, ಅಫಜಲಪುರ ಠಾಣೆಯ HC-246, DGPS ಠಾಣೆಯ PC-1599, 1461, 1420, 1416, 1498, 1735, 31, 1341, 1344 ಹಾಗೂ ಅಫಜಲಪುರ MPC-194 ರವರೊಂದಿಗೆ ಸದರಿ ಬಂದೋಬಸ್ತ ಕರ್ತವ್ಯಕ್ಕೆ ಹಾಜರಾಗಿರುತ್ತೇವೆ.

ದಿಃ 17-05-2010 ರಂದು ಬೆಳಿಗ್ಗೆ 7 ಗಂಟೆಗೆ ಸದರಿ ಕಾಲೇಜಿನ ಮುಖ್ಯದ್ವಾರದ ಬಳಿ ನಾನು ಹಾಗೂ ಮೇಲೆ ತಿಳಿಸಿದ ಸಿಬ್ಬಂದಿಗಳು ಕರ್ತವ್ಯಕ್ಕೆ ಹಾಜಾರಾಗಿರುತ್ತೇವೆ. ಮುಂಜಾನೆ 8 ಗಂಟೆ ಸುಮಾರಿಗೆ ಧ್ವನಿವರ್ಧಕದ ಮುಖಾಂತರ ಮತ ಎಣಿಕೆಯ ಹಾಗೂ ಮತಪೆಟ್ಟಿಗೆಗಳ ಮಾಹಿತಿಯನ್ನು ನಿಗದಿತ ತಅವಧಿಗೆ ನೀಡಲಾಗುತ್ತಿತ್ತು. ನಾನು ಮತ್ತು ಸಿಬ್ಬಂದಿ ವರ್ಗದವರು ಗೇಟಿನ ಮುಖಾಂತರ ಹೋಗುತ್ತಿರುವ ಏಜೆಂಟರಿಗೆ ಹಾಗೂ ಅಭ್ಯರ್ಥಿಗಳ ಗುರುತಿನ ಚೀಟಿ ಪರೀಕ್ಷಿಸುತ್ತಿದ್ದೆವು. ಸುಮಾರು 8-30 ಗಂಟೆಗೆ ಬಹಳಷ್ಟು ಜನರು ಮುಖ್ಯಧ್ರಾವದ ಬಳಿ ಸೆಸೇರಿ ಧ್ವನಿವರ್ಕದದಿಂದ ಸರಿಯಾದ ಮಾಹಿತಿ ಕೇಳುಸುತ್ತಿಲ್ಲವೆಂದು ಜನರು ಕೂಗಾಡುತ್ತಾ ಗಲಾಟೆ ಮಾಡುತ್ತಿದ್ದರು. ಆಗ ನಾನು ಮತ್ತು ಸಿಬ್ಬಂದಿ ಜನರು ಸೇರಿ ಗಲಾಟೆ ಮಾಡಬೇಡಿರಿ ಚುನಾವಣಾಧಿಕಾರಿಗೆ ವಿಷಯ ತಿಳಿಸಿ ಧ್ವನಿ ವರ್ದಕದ ಸರಿಯಾದ ವ್ಯವಸ್ಥೆ ಮಾಡಿಕೊಡಿಸುವುದಾಗಿ ಹೇಳುತ್ತಿದ್ದಾಗ ಎಲ್ಲರೂ ಸೇರಿ " ಏ ಬೋಸುಡಿ ಮಕ್ಕಳೆ ಒಳಗಡೆ ಬಿಡುತ್ತಿರ ಇಲ್ಲ " ಎಂದು ಗಲಾಟೆ ಮಾಡುತ್ತಾ ಮುಖ್ಯದ್ವಾರದ ಗೇಟನ್ನು ಒತ್ತಿ ಎಲ್ಲರೂ ಒಳಗೆ ನುಗ್ಗಿದರು. ಜನರು ಮತ ಎಣಿ ಕೇಂದ್ರಕ್ಕೆ ನುಗ್ಗಿ ಮತಪೆಟ್ಟಿಗೆ ಹಾನಿ ಮಾಡಿ ತೊಂದರೆ ಮಾಡಬಹುದು ಎಂಬ ಮುಂದಾಲೋಚನೆಯಿಂದ ನಾನು ಮತ್ತು ಸಿಬ್ಬಂದಿಯವರು ಮುಖ್ಯದ್ವಾರದಿಂದ ಹೊರಗೆ ಹಾಕಲು ಪ್ರಯತ್ನಿಸಿದಾಗ ಹೊರಗಿನಿಂದ ಎಸೆದ ಕಲ್ಲು ನನ್ನ ತಲೆಯ ಹಿಂಭಾಗದಲ್ಲಿ ಬಡೆದು ರಕ್ತಗಾಯವಾಗಿರುತ್ತದೆ. ಅದರಂತೆ ಚಾಸಾ 4, 5 ರವರಿಗೂ ಸಹ ಕಲ್ಲುಗಳು ಬಡಿದಿರುತ್ತವೆ. ಸದರಿ ಘಟನೆಯಲ್ಲಿ ಅಂದಾಜು 50-60 ಜನ ಬಾಗಿಯಾಗಿದ್ದರು. ಸದರಿ ಘಟನೆಯಲ್ಲಿ ಈದಿನ ನ್ಯಾಯಾಲಯದ ಮುಂದಿರುವ ಆರೋಪಿನೂ ಸಹ ಇತರ ಆರೋಪಿತರೊಂದಿಗೆ ಅಪರಾದವೆಸಗಲು ಭಾಗಿಯಾಗಿದ್ದನು.

ಈ ಘಟನೆಯಲ್ಲಿ ನಮಗಾದ ಗಾಯಗಳು ಉಪಚಾರಕ್ಕೆಂದು ನಾನು PC-1420, 1461 ರವರೊಂದಿಗೆ ಸರಕಾರಿ ಆಸ್ಪತ್ರೆ ಅಫಜಲಪೂರದಲ್ಲಿ ಒಂದು ಚಿಕಿತ್ಸೆ ಪಡೆದುಕೊಂಡಿರುತ್ತೇನೆ. ಆನಂತರ ಘಟನೆ ಕುರಿತು ಅಫಜಲಪುರ ಠಾಣೆಯಲ್ಲಿ ಪ್ರಕರಣ ದಾಖಲಿಸಿರುತ್ತೇನೆ. ದಿಃ 18-05-2010 ರಂದು ಮಾನ್ಯ CPI ರವರು ಮಾಡಿದ ಘಟನಾ ಸ್ಥಳದ ಪಂಚನಾಮೆಯನ್ನು ನಾನು ತೋರಿಸಿದ್ದು ಪಂಚನಾಮೆ ಜರುಗಿಸಿ ಸ್ದಳದಿಂದ ಹಲ್ಲೆಗೆ ಬಳಸಿದ ನಾಲ್ಕು ಕಲ್ಲುಗಳನ್ನು ನನ್ನ ಸಮಕ್ಷಮ ಚಾಸಾ 23 ರವರು ಜಪ್ತಿಪಡಿಸಿಕೊಂಡಿರುತ್ತಾರೆ.

ದಿಃ 27-04-2011 ರಂದು ಮಾನ್ಯ ಸಿಪಿಐ ರವರು ಮಾಡಿದ ತನಿಖೆಯಲ್ಲಿ ಒಟ್ಟು 36 ಜನ ಅಪರಾಧದಲ್ಲಿ ಭಾಗಿಯಾಗಿರುತ್ತಾರೆಂದು ಕಂಡುಬಂದಿದ್ದರಿಂದ ಈ ಕುರಿತು ನಾನು ಪುರವಣಿ ಹೇಳಿಕೆಯನ್ನು ನೀಡಿರುತ್ತೇನೆ.

ಸಾಕ್ಷಿ ಫಿರ್ಯಾದಿಯನ್ನು ನೋಡಿ ಗುರುತಿಸಿದ್ದು ಅದನ್ನು ನಿಪಿ-**8** ಎಂದು ಸಾಕ್ಷಿ ಸಹಿಯನ್ನು ನಿಪಿ-**8**(ಎ) ಎಂದು ಗುರುತಿಸಲಾಯಿತು. ಹಲ್ಲೆಗೆ ಬಳಸಿದ ಕಲ್ಲುಗಳನ್ನು ನೋಡಿದಲ್ಲಿ ಗುರುತಿಸುತ್ತೇನೆ.

<u>ಪಾಟೀಸವಾಲುಃ ಆರೋಪಿತರ ಪರ **SSP** ವಕೀಲರಿಂದ :-</u>

ಮತಗಟ್ಟೆಯ ಎಣಿಕೆ ಸ್ಥಳದಿಂದ 200 ಮೀಟರ ಅಂತರವನ್ನು ಏಜೆಂಟರು ಹಾಗೂ ಅಭ್ಯರ್ಥಿಗಳನು ಹೊರತುಪಡಿಸಿ ಉಳಿದ ಜನರು ಅಂತರ ಕಾಯ್ದುಕೊಳ್ಳಲು ಆದೇಶವಿರುತ್ತದೆ. ಘಟನಾ ಸ್ಥಳದ ಮುಂಭಾಗದಲ್ಲಿ ಹೋಟೆಲ ಹಾಗೂ ಅಂಗಡಿಗಳಿರುತ್ತವೆ ಎಂದರೆ ಸರಿ. ಅದೇ ರೀತಿ ಗೇಟಿನ ಮುಂಭಾಗ ಮುಖ್ಯರಸ್ತೆಯಿದ್ದು ಹಲವಾರು ವಾಹನಗಳು ಓಡಾಡುತ್ತವೆ. ಗ್ರಾ.ಓಂ. ಚುನಾವಣೆ ಎಣಿಕೆಯಿರುವುದರಿಂದ ವಿವಿಧ ಗ್ರಾಮಗಳಿಂದ ಸಾವಿರಾರು ಜನರು ಸೇರಿರುತ್ತಾರೆ. 200 ಮೀಟರ ಅಂತರ ಕಾಯ್ದುಕೊಳ್ಳುವ ಸ್ಥಳದಲ್ಲಿಯೂ ಸಹ ಪೋಲಿಸ ಸಿಬ್ಬಂದಿನೇಮಿಸಿರುತ್ತಾರೆ ಎಂದರೆ ನಾನು ಗಮನಿಸಿಲ್ಲ ಎಂದು ಹೇಳುತ್ತಾರೆ. ಎಷ್ಟು ಧ್ವನಿ ವರ್ಧಕಗಳು ಅಳವಡಿಸಿದ್ದರು ಎಂದು ನಾನು ಗಮನಿಸಿಲ್ಲ. ಆದರೆ ಎರಡು ದ್ವನಿ ವರ್ದಕಗಳನ್ನು ಗಮನಿಸಿದ್ದೇನೆ. ವ್ಯಾಪಾರಕ್ಕಾಗಿ ಗ್ರಾಮದಿಂದ ಹಲವಾರು ಜನ ಘಟನ ಸ್ಥಳದ ಹತ್ತಿರವಿದ್ದ ಅಂಗಡಿ ಮುಗ್ಗಟ್ಟುಗಳಿಗೆ ಬಂದಿದ್ದರು ಎಂದರೆ ನಾನು ಗಮನಿಸಿಲ್ಲ.

ಘಟನೆ ದಿವಸ ಚುನಾವಣೆ ಸಿಬ್ಬಂದಿ ಜನರೂ ಸಹ ನಮ್ಮ ಜೊತೆಗಿದ್ದರು. ನಮ್ಮ ಜೊತೆಗಿದ್ದ ಚುನಾವಣೆ ಸಿಬ್ಬಂದಿ ಜನರ ಹೆಸರು ನನಗೆ ಗೊತ್ತಿಲ್ಲ. ನಮಗೆ ಯಾರೂ ಕಲ್ಲಿನಿಂದ ಬೀಸಿ ಹೊಡೆದಿರುತ್ತಾರೆಂದು ನಿಖರವಾಗಿ ಗೊತ್ತಿಲ್ಲ. ಸಾಕ್ಷಿ ಆರೋಪಿತರಲ್ಲಿನ ಜನರು ಹಲ್ಲೆ ಮಾಡಿರುತ್ತಾರೆಂದು ಹೇಳುತ್ತಾರೆ. ಘಟನಾ ಸ್ಥಳದಲ್ಲಿ ಆರೋಪಿತರು ಯಾರು ಇದ್ದಿರಲಿಲ್ಲ ಎಂದರೆ ಸರಿಯಲ್ಲ. ಆರೋಪಿತರಿಗೆ ಆಗಿ ಬರದವರ ಮಾತುಕೇಳಿಕೊಂಡು ಸುಳ್ಳು ಪ್ರಕರಣ ದಾಖಲಿಸಿರುತ್ತೇನೆ ಎಂದರೆ ಸರಿಯಲ್ಲ.

ಆರೋಪಿತರು ಧ್ವನಿವರ್ಧಕ ಸಂಬಂಧ ಜಗಳ ತೆಗೆದು ಮು.ಮಾ. 1 ರಿಂದ 4 ನನಗೆ ಹಾಗೂ ಚಾಸಾ 4, 5 ರವರಿಗೆ ಹಲ್ಲೆ ಮಾಡಿರುತ್ತಾರೆ ಎಂದು ಸುಳ್ಳು ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ. ತನಿಖೆಯಲ್ಲಿ ಆರೋಪಿತರು ಅಪರಾದದಲ್ಲಿ ಭಾಗಿಯಾಗಿರುತ್ತಾರೆಂದು ಗೊತ್ತಾದಾಗ ಆ ಕುರಿತು ಪುರವಾಣಿ ಹೇಳಿಕೆ ನೀಡಿರುತ್ತೇನೆಂದು ಸುಳ್ಳು ಹೇಳುತ್ತಿದೇನೆ ಎಂದರೆ ಸರಿಯಲ್ಲ.

ನಾನು ತೋರಿಸಿದ ಘಟನಾ ಸ್ಥಳವನ್ನು ಚಾಸಾ 23 ರವರುಪಂಚನಾಮೆ ಮಾಡಿ ಹಲ್ಲೆಗೆ ಬಳಸಿದ ಮು.ಮಾ. 1 ರಿಂದ 4 ಜಪ್ತಿಪಡಿಸಿಕೊಂಡಿರುತ್ತಾರೆ ಎಂದು ಸುಳ್ಳು ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ. ಆರೋಪಿತರಿಗೂ ಹಾಗೂ ಈ ಘಟನೆಗೂ ಯಾವುದೇ ಸಂಬಂಧ ಇಲ್ಲದಿದ್ದರೂ ಆರೋಪಿತರ ವಿರುದ್ದ ಸುಳ್ಳು ಪ್ರಕರಣ ದಾಖಲಿಸಿ ಸುಳ್ಳು ಸಾಕ್ಷಿ ನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ.

<u>ಮರು ವಿಚಾರಣೆಃ - **ಇಲ್ಲ.**</u>

(ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತ ಲೇಖನದಂತೆ ಬೆರಳಚ್ಚು ಮಾಡಲಾಯಿತು)

ಓ ಹೇ ಕೇ ಸರಿ ಇದೆ

ಸಿವಿಲ್ & ಪ್ರ.ದ.ನ್ಯಾ. ದಂಡಾಧಿಕಾರಿಗಳು
ಅಫಜಲಪೂರ